ನಿರ್ಮಲ "ಇಲ್ಲರೀ ಅವಳೇ ನನ್ನ ತಾಯಿ. ನನಗೆ ಈಗ ಎಲ್ಲ ಗೊತ್ತಾಗ್ತಾ ಇದೆ. ನಾನು ಪಾಪಿ. ನನ್ನ ತಾಯಿಯನ್ನೇ ಗುರುತಿಸದೇ ಹೋದೆ. ನನ್ನ ಋಣ ಅಷ್ಟೇ ಏನೋ" ಅಂದು ರಾತ್ರಿಯಿಡೀ ಅತ್ತಳು.

ಮರುದಿನ ಸಂಜೆ ಅವಳು ಬೇರೆ ಸೀರೆ ಉಟ್ಟುಕೊಂಡು ರೈಲ್ವೇ ಸ್ಟೇಷನ್ ಕಡೆ ಹೊರಟಾಗ ಮುರುಳಿ "ಎಲ್ಲಿಗೆ ಹೊರಟೆ" ಅಂದ. "ರೈಲ್ವೇ ಸ್ಟೇಷನ್ನಿಗೆ, ಅಮ್ಮ ಇವತ್ತು ಬಂದ್ರೂ ಬರಬಹುದು" ಅಂದು ನಡೆದಳು. ಮುರುಳಿಗೆ ಏನು ಮಾತಾಡಬೇಕೋ ತಿಳಿಯಲಿಲ್ಲ. ಅವನೂ ಜೊತೆಯಲ್ಲಿ ಹೋದ. ಅವತ್ತು ರೈಲು ಬಂತು ಹೋಯ್ತು. ಆ ಹೆಂಗಸು ಬರಲಿಲ್ಲ. ಮರುದಿನವೂ ಬರಲಿಲ್ಲ, ಅದರ ಮರುದಿನವೂ ಬರಲಿಲ್ಲ.

ಇದೆಲ್ಲ ಆಗಿ ಸುಮಾರು ಒಂದು ವರ್ಷವೇ ಆಗುತ್ತಾ ಬಂದಿದೆ. ನಿರ್ಮಲ ಈಗ ಆರು ತಿಂಗಳ ಮಗುವಿನ ತಾಯಿ. ಈಗ ಅವಳು ದಿನಾಗಲೂ ಸಂಜೆ ಆ ಮಗೂನೂ ಕಟ್ಕೊಂಡು ರೈಲ್ವೇ ಸ್ಟೇಷನ್ನಿಗೆ ಬರ್ತಾಳೆ. "ನಿನ್ನ ಅಜ್ಜಿ ಬರ್ತಾಳೆ ನೋಡ್ತೀಯಾ. ಅಜ್ಜಿ ಇವತ್ತು ಬರಬಹುದು, ನಿನಗೆ ಏನಾದ್ರೂ ತರಬಹುದು" ಅಂತ ಕುತೂಹಲದಿಂದ ನೋಡ್ತಾನೇ ಇರ್ತಾಳೆ. ಸ್ಟೇಷನ್ ಮಾಸ್ಟರು ಯಾರೊಂದಿಗೋ ''ಅದೇನು ಕತೆಯೋ ಏನೋ ತಂದೆ ಮಗಳು ದಿನಾ ಬಂದು ಹೋಗೋರು ಈಗ ಮಗಳು ಮೊಮ್ಮಗಳು ಬರ್ತಿದಾರೆ ಅದ್ಯಾರಿಗೆ ಕಾಯ್ತಿದಾರೋ, ಅವರು ಬರ್ತಾರೋ ಇಲ್ಲವೋ ಇವರು ದಿನಾ ಇಲ್ಲಿಗೆ ಬರೋದಂತೂ ಬಿಡ್ತಿಲ್ಲ'' ಅಂದರು.

ಈಗಲೂ ನಿರ್ಮಲ ದಿನಾ ರೈಲ್ವೇ ಸ್ಟೇಷನ್ನಿಗೆ ಹೋಗ್ತಾನೇ ಇದಾಳೆ.

## ಬೇಲೂರು ರಾಮಮೂರ್ತಿ

ಸುಮಾರು 40 ವರ್ಷಗಳಿಂದ ಕತೆ, ಹಾಸ್ಯ ಲೇಖನ, ಲಲಿತ ಪ್ರಬಂಧಗಳನ್ನು ಬರೆಯುತ್ತ ಬಂದಿರುವ ರಾಮಮೂರ್ತಿ ಅವರದು ಕನ್ನಡ ಓದುಗರಿಗೆ ಪರಿಚಿತ ಹೆಸರು. ಬಿ.ಕಾಂ ಪದವೀಧರ. ಖಾಸಗಿ ಎಲೆಕ್ಟ್ರಿಕ್ ಕಂಪೆನಿಯಲ್ಲಿ ಆಡಿಟ್ ಆಫೀಸರ್ ಆಗಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಆಡಳಿತ ಸಲಹೆಗಾರರು ಹಾಗೂ ಆಂತರಿಕ ಲೆಕ್ಕ ಪರಿಶೋಧಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ತನಕ ಅವರ 97 ಪುಸ್ತಕಗಳು ಪ್ರಕಟವಾಗಿವೆ. ರಾಮಮೂರ್ತಿ, ದೂರದರ್ಶನ ಹಾಗೂ ಆಕಾಶವಾಣಿ ಕಲಾವಿದರೂ ಕೂಡ. 'ಕೋತಿಗಳು ಸಾರ್ ಕೋತಿಗಳು', 'ಪ್ರೀತಿ ಮಾಡೋ ಹುಡುಗರಿಗೆಲ್ಲಾ', 'ರೋಮಿಯೋ ಜೂಲಿಯಟ್', 'ಸಜನಿ' ಮತ್ತಿತರ ಸಿನಿಮಾಗಳಿಗೆ ಗೀತೆಗಳನ್ನು ಬರೆದಿದ್ದಾರೆ.